**ದಿನಾಂಕಃ 22-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀಮತಿ ವಿ.ಕೆ.ಕೆ.,ವಾದಿ ಪರ ವಕೀಲರಿಂದಃ**

ಈ ದಾವೆಯಲ್ಲಿ ನಾನು ವಾದಿ ಬ್ಯಾಂಕಿನ ಮ್ಯಾನೇಜರಾಗಿರುತ್ತೇನೆ, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿಗಳು ನನ್ನವೇ ಆಗಿರುತ್ತವೆ.

ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಲ ಕೇಳಿ ಪ್ರತಿವಾದಿಯು ನೀಡಿರುವ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-1** ಎಂದು, ಸಾಲ ಮಂಜೂರಾತಿ ಮಾಡಿರುವ ಬಗ್ಗೆ ಮಂಜೂರಾತಿ ಪತ್ರವನ್ನು **ನಿಪಿ-2** ಎಂದು, ಹೈಪೋಥಿಕೇಶನ್ ಅಗ್ರಿಮೆಂಟನ್ನು **ನಿಪಿ-3** ಎಂದು, Simple Mortgage deed ನ್ನು **ನಿಪಿ-4** ಎಂದು, ಸರ್ವೆ ನಂಬರ 93/3 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯ ದೃಢೀಕೃತ ನಕಲನ್ನು **ನಿಪಿ-5** ಎಂದು, ದಿನಾಂಕಃ 16-12-2025 ರಂದು ಪ್ರತಿವಾದಿಗೆ ನೀಡಿರುವ ನೋಟಿಸನ ಪ್ರತಿಯನ್ನು **ನಿಪಿ-6** ಎಂದು, ಸದರಿ ನೋಟಿಸ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು **ನಿಪಿ-7** ಎಂದು, ಪ್ರತಿವಾದಿಯ ಸಾಲದ ಖಾತೆಯ ಅಕೌಂಟ ಸ್ಟೇಟ್ ಮೆಂಟನ ದೃಢೀಕೃತ ನಕಲನ್ನು **ನಿಪಿ-8** ಎಂದು ಗುರುತಿಸಲಾಯಿತು.

ಪ್ರತಿವಾದಿಯು ಏಕಪಕ್ಷೀಯವಾಗಿರುವುದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.